ಪಿ.ಜೆ. ರಾಘವೇಂದ್ರ, ಮೈಸೂರು
*ಹಿರಣ್ಯಕಶಿಪುವಿನಂತಹ ರಾಜಕಾರಣಿಗಳ ಹೊಟ್ಟೆಯಲ್ಲಿ ಪ್ರಹ್ಲಾದನಂತಹ ಮಕ್ಕಳು ಹುಟ್ಟುವುದಿಲ್ಲವೇಕೆ ರಾಮ್?*



ಬ್ರಹ್ಮನ ಬಳಿ ಇದ್ದ ಆ ಮಾಡಲ್‌ನ ಮೌಲ್ಡ್ ಕಳೆದುಹೋಗಿದೆಯಂತೆ!

ಕುಬೇರಪ್ಪ ಎಂ. ವಿಭೂತಿ, ಹರಿಹರ
*ನಟಿಯರು ಬೆತ್ತಲೆ ಆಗುವುದು ಒಂದು ಅಪೂರ್ವ ಕಲೆಯಂತೆ. ಹೌದಾ ಗುರುವೆ?*
ಹಾಗೆಂದು ಅವರನ್ನು ನಂಬಿಸುವುದು ಗಂಡಿಗೆ ಒಲಿದಿರುವ ಪರಮ(ನೀಚ) ಕಲೆ!

ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*ಭಾರತದಲ್ಲಿ ರೈತನನ್ನು ಮೊದಲ ದರ್ಜೆಯ ಪ್ರಜೆಯಂತೆ ಗೌರವಿಸುವುದು ಯಾವಾಗ?*
ಹಾಗೆ ಗುರುತಿಸುವ ಯೋಗ್ಯತೆ ಗೌರವಿಸುವ ಪಡೆಗೆ ಬಂದಾಗ!

ಬಸವನಗೌಡ, ಹೆಬ್ಬಳಗೆರೆ
*ಪುರಾಣ ಕಥೆಗಳಲ್ಲಿ ಬರುವ ರಾಕ್ಷಸರು ಈಗ ಎಲ್ಲಿ ಹೋಗಿರಬಹುದು ಸಾರ್?*




ಬಕಾಸುರ ಪಿಡಬ್ಲ್ಯುಡಿಗೆ, ಕುಂಭಕರ್ಣ ಪಾರ್ಲಿಮೆಂಟಿಗೆ, ಬಲಿ ಚಕ್ರವರ್ತಿ ಗಣಿಗೆ......

ಆರ್. ಮಧುಸೂದನ್, ಹಾಸನ
*ಶ್ರೀಕೃಷ್ಣ ಜೈಲಿನಲ್ಲೇ ಹುಟ್ಟಿದ್ದೇಕೆ?*
ಆಗ ಒಳ್ಳೆಯ ಹೆರಿಗೆ ಆಸ್ಪತ್ರೆಗಳಿರಲಿಲ್ಲವಂತೆ!

ಬಿ. ಚಂದ್ರೇಗೌಡ, ಬೆಂಗಳೂರು
*ಆತ್ಮವಿಶ್ವಾಸದ ಪರಮಾವಧಿ ಯಾವುದು?*
ಹೆಂಡದ ಕಡಾಯಿಯಲ್ಲಿ ಬಿದ್ದಿದ್ದ ಇಲಿ ಬೆಕ್ಕಿನ ಮುಂದೆ ನಿಂತು ತೊಡೆ ತಟ್ಟುವುದು!

ಹೇಮಾವತಿ ಜೈನ್, ಹೂವಿನಹಡಗಲಿ
*ಉತ್ತರ ಸಂಪತ್ತನ್ನು ಸೃಷ್ಟಿಸುತ್ತೀರಿ; ಆದರೆ ಲಾಭವನ್ನು ಸಮಾಜ ಏಕೆ ಪಡೆಯುತ್ತಿಲ್ಲ?*
ಸಮಯ ಪಕ್ವವಾಗಿಲ್ಲ. ಸಾಮಾನ್ಯವಾಗಿ ಲೇಖಕ ಸತ್ತನಂತರ ಅವನ ಕೃತಿಗಳನ್ನು ಕೊಂಡಾಡುವುದು ಕನ್ನಡಿಗರ ಪರಿ!

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ
*ಪ್ರೀತಿಸುವವರು ನದಿಯ ದಂಡೆಗಳ ಮೇಲೇಕೆ ಕೂರುತ್ತಾರೆ?*
ಅವರದು ತೀರದ ಪ್ರೀತಿ!

ಉದಯಶಂಕರರಾವ್, ದೊಡ್ಡಬಳ್ಳಾಪುರ
*ಹಿಂದಿನ ಸಾಲ ತೀರಿಸಲೆಂದು ಬಂದ ನಮಗೆ ದೇವರಿಂದ ಸಬ್ಸಿಡಿ ಸಿಗಬಹುದೆ?*
ಇಲ್ಲ. ಮುಂದಿನ ಜನ್ಮಕ್ಕೆ ಕ್ಯಾರಿ ಓವರ್ ಮಾತ್ರ ಇದೆ!

ಎಸ್. ಶ್ರಾವ್ಯ, ದಾವಣಗೆರೆ
*ಒಂದು ವೇಳೆ ಸಮುದ್ರದ ನೀರೆಲ್ಲವೂ ಸಿಹಿಯಾಗಿದ್ದಿದ್ದರೆ ಏನಾಗುತ್ತಿತ್ತು?*
ಸಮುದ್ರದ ತೀರವೆಲ್ಲಾ ನೊಣ, ಗೊದ್ದ, ಇರುವೆಗಳಿಂದ ತುಂಬಿರುತ್ತಿತ್ತು!

ರವಿ ಪೈ, ಹೊನ್ನಾವರ
*ಗಣೇಶನ ಕೈಯಲ್ಲೇಕೆ ಪಾಶ, ಅಂಕುಶ?*
ಗಜಮುಖನಲ್ಲವೇ; ಇಲಿ ತಪ್ಪಿಸಿಕೊಳ್ಳದಂತೆ ಹಿಡಿಯಲು ಪಾಶ, ಸ್ವಯಂ ನಿಯಂತ್ರಣಕ್ಕೆ ಅಂಕುಶ!

ಇಂದಿರಾ ಶ್ರೀಧರ್, ದಾವಣಗೆರೆ
*ಮೋದಿ ಪ್ರಧಾನಿಯಾದರೆ ಬೇರೆ ಬೇರೆ ಸಾಹಿತಿಗಳೂ ದೇಶ ತ್ಯಜಿಸುವರೆ?*
ಏಕೆ ತ್ಯಜಿಸಬೇಕು? ಅವರು ಸಾಹಿತಿಗಳಾದುದಕ್ಕೆ ಮೋದಿ ದೇಶ ತ್ಯಜಿಸಲಿಲ್ಲವಲ್ಲ!

ಎಂ.ಆರ್. ಪವನ್ ಕುಮಾರ್, ಬಳ್ಳಾರಿ
*ಬೆಳಕಿಗೂ, ಕತ್ತಲಿಗೂ ಈಗಿನ ಕಾಲದಲ್ಲಿ ಏನು ವ್ಯತ್ಯಾಸ?*
ಸ್ವಿಚ್ಚು!

## ಬಹುಮಾನಿತ ಪ್ರಶ್ನೆ

ಎಚ್.ಆರ್. ದೇಸಾಯಿ, ರಾಯಚೂರು
*ಗಂಡುಮಗ ನಮ್ಮನ್ನು ಸ್ವರ್ಗಕ್ಕೆ ಸೇರಿಸುತ್ತಾನಂತೆ. ಹೆಣ್ಣುಮಗಳು?*
ಇಲ್ಲಿಯೇ ಸ್ವರ್ಗ ನಿರ್ಮಿಸಿಕೊಡುತ್ತಾಳೆ.

ಸಡ್ಲಪಲ್ಲಿ ರಾಮಕೃಷ್ಣಾರೆಡ್ಡಿ, ಯಲಹಂಕ
*ದೂರದ ಬೆಟ್ಟ ನುಣ್ಣಗೆ ಕಾಣಿಸುತ್ತದೆ. ಹತ್ತಿರದ ಬೆಟ್ಟ ಹೇಗೆ ಕಾಣಿಸುತ್ತದೆ?*
ಹತ್ತಿರದ ಬೆಟ್ಟ ಇಲ್ಲವೇ ಇಲ್ಲ. ಎಲ್ಲಾ ಬೆಟ್ಟಗಳೂ ಹತ್ತಿರುವಂತಹವೇ!

ಅಲ್ಲಾ ಬಕ್ಷ, ಮಧುಗಿರಿ
*ಮೋದಿ ಜನರಿಗೆ ಮೋಡಿ ಮಾಡಲು ಸಾಧ್ಯವೆ?*
ಮೋಡಿಯ ಅಗತ್ಯವಿಲ್ಲ. ರಾಹುಲ್ ಹೆಚ್ಚು ಹೆಚ್ಚು ಭಾಷಣ ಮಾಡಿದರೆ ಮೋದಿಯ ಗೆಲುವು ಖಚಿತ!

ಶೋಭಾ ಎಂ.ಆರ್. ಹಾಸನ
*ನನ್ನ ಮಗಳಿಗೆ ಹಲ್ಲುಜ್ಜಿಕೊ, ಸ್ನಾನ ಮಾಡು ಎಂದರೆ 'ಹುಲಿ-ಸಿಂಹಗಳು ಹಲ್ಲುಜ್ಜಿಕೊಳ್ಳುತ್ತಾ, ಸ್ನಾನ ಮಾಡತ್ತಾ?' ಎನ್ನುವಳಲ್ಲಾ...?*



'ಅದಕ್ಕೇ ಅವುಗಳಿಗೆ ಯಾರೂ ಐಸ್‌ಕ್ರೀಮು, ಚಾಕ್ಲೆಟ್ಟು ಕೊಡ್ಸಲ್ಲ' ಅನ್ನಿ. ದಾರಿಗೆ ಬರ್ತಾಳೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಪತ್ರಕರ್ತನಲ್ಲಿ ಮಾನವೀಯ ಮೌಲ್ಯಗಳು ಸತ್ತಾಗ ಉಳಿಯುವುದೇನು?*
ಒಂದು ಪೀತಪತ್ರಿಕೆ (yellow journal), ಅಪಾರ ಲೂಟಿ!

ಜಯದೇವ ಹಲಕಿ, ಗೋಕಾಕ ಫಾಲ್ಸ್
*ಕೋಳಿ ಮೊದಲೋ, ಮೊಟ್ಟೆ ಮೊದಲೋ?*
ನಿಘಂಟಿನ ಪ್ರಕಾರ ಕೋಳಿಯೇ!

ರಾಮ್